ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-2, September-October 2025, Pp. 74-79
©*IIMRD*, Mysuru
IIMRD JOURNALS
www.iimrd.com

# ಕನಕದಾಸರ ರಾಮಧಾನ್ಯ ಚರಿತೆ: ಆಧುನಿಕ ಅನುಸಂಧಾನ

**ವಿಜಯಕುಮಾರ. ಆರ್. ಮಶಿಹಾಳ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿಸ್ತರಣಾ ಕೇಂದ್ರ ದೇವದುರ್ಗ

**ಸಾರಾಂಶ: (Abstract)**

*ರಾಮಧಾನ್ಯ ಚರಿತೆಯು ಕನಕದಾಸರ ವಿಡಂಬನಾತ್ಮಕ ಕಾವ್ಯವಾಗಿದ್ದು, ರಾಗಿ ಮತ್ತು ಭತ್ತದ ನಡುವೆ ತಮ್ಮ ಶ್ರೇಷ್ಠತೆಯ ಬಗ್ಗೆ ಉಂಟಾದ ಜಗಳವನ್ನು ರಾಮನು ಬಗೆಹರಿಸುವ ಕಥೆಯನ್ನು ಹೇಳುತ್ತದೆ. ಇಲ್ಲಿ ಮೇಲ್ವರ್ಗದವರಿಗೆ (ಭತ್ತ) ಮತ್ತು ಕೆಳವರ್ಗದವರಿಗೆ (ರಾಗಿ) ಪ್ರತೀಕವಾಗಿದೆ ಮತ್ತು ಸಾಮಾಜಿಕ ವರ್ಗ ತಾರತಮ್ಯವನ್ನು ರೂಪಕದ ಮೂಲಕ ವಿವರಿಸಲಾಗಿದೆ. ಈ ಕಾವ್ಯವು ಸಾಮಾಜಿಕ ವರ್ಗಗಳ ನಡುವಿನ ಅಸಮಾನತೆ ಮತ್ತು ಶೋಷಣೆಯನ್ನು ಬಿಂಬಿಸುವ ಒಂದು ರೂಪಕವಾಗಿದೆ. ಈ ಕಾವ್ಯದಲ್ಲಿ ಶೋಷಿತ ವರ್ಗವು ತನ್ನ ಆತ್ಮಗೌರವಕ್ಕಾಗಿ ನಡೆಸುವ ಹೋರಾಟವನ್ನು ಇದು ತೋರಿಸುತ್ತದೆ. ಸಾಮಾಜಿಕ ಅಸಮಾನತೆ ಮತ್ತು ವರ್ಗ ತಾರತಮ್ಯದ ವಿರುದ್ಧ ಕನಕದಾಸರ ವಿಡಂಬನೆಯಾಗಿದೆ.*

**ಮುಖ್ಯಪದಗಳು (Keywords):** *ದಾಸಸಾಹಿತ್ಯ, ಕನಕದಾಸರು, ರಾಮಧಾನ್ಯ ಚರಿತೆ, ವರ್ಗ ತಾರತಮ್ಯ, ಸಾಮಾಜಿಕ ಅಸಮಾನತೆ,*

## ಪೀಠಿಕೆ

ಕನಕದಾಸರು ಕವಿ ವಿಶಿಷ್ಟವಾದ ಸಹಜ ಪ್ರತಿಭೆಯಿಂದ ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆ. ಕನಕದಾಸರು ಕನ್ನಡ ನಾಡು–ನುಡಿ ಸಂಸ್ಕೃತಿಯಲ್ಲಿ ಬೆರೆತುಹೋಗಿರುವ ಒಬ್ಬ ಧೀಮಂತ ವ್ಯಕ್ತಿ. ದಾಸ ಸಾಹಿತ್ಯದಲ್ಲಿ ಅವರದು ವೈಶಿಷ್ಟ್ಯಪೂರ್ಣವಾದ ವರ್ಚಸ್ಸು. ಕೀರ್ತನಕಾರರಾಗಿ, ಸಂತರಾಗಿ, ಸಮಾಜ ಸುಧಾರಕರಾಗಿ ಅವರು ಕನ್ನಡ ಸಾಂಸ್ಕೃತಿಕ ಜಗತ್ತಿಗೆ ನೀಡಿರುವ ಕೊಡುಗೆ ಅನನ್ಯವಾದದ್ದು. ಅವರು ಸಮಾಜದ ಅಂಕುಡೊಂಕುಗಳನ್ನು ತಿದ್ದಿ, ಮಾನವತೆಯನ್ನು ಮೆರೆದ ಕ್ರಾಂತಿಕಾರಿ ಕವಿ. ಇವರು ತಮ್ಮ ಬದುಕು ಮತ್ತು ಕೃತಿಗಳ ಮೂಲಕ ಪ್ರತಿಪಾದಿಸಿರುವ ಜೀವನದರ್ಶನ ಸಾರ್ವಕಾಲಿಕ; ವಿಚಾರಪೂರ್ಣ. ತಮ್ಮ ಕೀರ್ತನೆ ಹಾಗೂ ಕಾವ್ಯಗಳಲ್ಲಿ ಕಾವ್ಯಗುಣದ ಜೊತೆಗೆ ಸಾಮಾಜಿಕ ಕಳಕಳಿಯನ್ನು, ದೇಸೀ ಸತ್ವವನ್ನು ಮೆರೆದಿದ್ದಾರೆ. ಕನಕದಾಸರು ದಾಸರಲ್ಲಿ ಕವಿಗಳಾಗಿದ್ದಾರೆ, ಇದೇ ಅವರ ವೈಶಿಷ್ಟ್ಯ. ಕನಕದಾಸರು ಹಲವಾರು ಭಾವಪೂರ್ಣ ಕೀರ್ತನೆಗಳನ್ನು ರಚಿಸಿದ್ದಾರೆ. ದಾಸ ಪರಂಪರೆಯಲ್ಲಿ ಕನಕದಾಸರ ಕಾಲವೆಂದರೆ ಕೀರ್ತನ ಸಾಹಿತ್ಯದ ಸುವರ್ಣಯುಗ ಎನ್ನಬಹುದು.

*Please cite this article as:* ವಿಜಯಕುಮಾರ. ಆರ್. ಮಶಿಹಾಳ. (2025). ಕನಕದಾಸರ ರಾಮಧಾನ್ಯ ಚರಿತೆ: ಆಧುನಿಕ ಅನುಸಂಧಾನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(2). ಪು.ಸಂ.* 74–79

ಕನಕದಾಸರು ಒಬ್ಬ ಮಹಾನ್ ಸಂತನಂತೆ ಸರ್ವವನ್ನು ತ್ಯಾಗ ಮಾಡಿದ ಪರಿ ಗಮನಾರ್ಹವಾದುದು. ಆಗಮ್ಯ ಮಹಿಮಾಶೀಲರೂ ಆದ ಕನಕದಾಸರು, ಹಲವಾರು ಸಾಧಕರು, ಸಂತರು ಮೊದಲಾದವರ ವಿಶಾಲ ಮನೋಧರ್ಮದ ಎಳೆಯನ್ನು ಕಂಠಾಭರಣವಾಗಿ ಮಾಡಿಕೊಂಡವರು. ಕನಕದಾಸರು ಕೇವಲ ಕೀರ್ತನೆಗಳನ್ನು ರಚಿಸಲಷ್ಟೇ ಸೀಮಿತ ಪರಿಧಿಯನ್ನು ಇಟ್ಟುಕೊಳ್ಳದೆ ಒಬ್ಬ ಕವಿಯಾಗಿ, ವಿಮರ್ಶಕನಾಗಿ, ಇದಕ್ಕೂ ಪೂರ್ವದಲ್ಲಿ ಪಾಳೇಗಾರನಾಗಿ ವಿಜಯನಗರ ಸಾಮ್ರಾಜ್ಯದ ಡಣ್ಣಾಯಕನಾಗಿ ಕಾರ್ಯನಿರ್ವಹಿಸಿದರು. ಕರ್ನಾಟಕ ಧಾರ್ಮಿಕ ಪರಂಪರೆಯಲ್ಲಿ ಮಿನುಗಿದ ಸಂತ ಶ್ರೇಷ್ಠರಲ್ಲಿ ಕನಕದಾಸರ ಹೆಸರು ಅಜರಾಮರವಾಗಿದೆ. ಅವರದು ಬಹುಮುಖ ವ್ಯಕ್ತಿತ್ವ ಲೌಕಿಕ ಮತ್ತು ಆಧ್ಯಾತ್ಮಿಕ ಎರಡು ಕ್ಷೇತ್ರದಲ್ಲೂ ಅನುಭವ, ಅನುಭಾವವನ್ನು ಪಡೆದವರು. ಬೀರಪ್ಪ ಮತ್ತು ಬಚ್ಚಮ್ಮ ದಂಪತಿಗಳ ಮಗನಾಗಿ ಹುಟ್ಟಿದ ತಿಮ್ಮಪ್ಪ ಮುಂದೆ ಕನಕದಾಸನಾದ ಪರಿ ವಿಸ್ಮಯದಿಂದ ಕೂಡಿದೆ. ಕನಕದಾಸರು ಪ್ರಸಿದ್ಧ ಕೀರ್ತನಾಕಾರರೆಂದು ಹೆಸರು ಪಡೆದವರು. ಅವರ ಕೀರ್ತನೆಗಳಲ್ಲಿ ಭಕ್ತಿ, ವೈರಾಗ್ಯ, ಜ್ಞಾನಗಳಲ್ಲದೆ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಉತ್ತಮ ಸಮಾಜ ರೂಪಿಸುವ ಮಾರ್ಗದರ್ಶನಗಳು ಅಲ್ಲಿವೆ. ಅವರು ರಚಿಸಿದ ರಾಮಧಾನ್ಯ ಚರಿತ್ರೆ, ಮೋಹನ ತರಂಗಿಣಿ, ನಳಚರಿತ್ರೆ ಮತ್ತು ಹರಿಭಕ್ತ ಸಾರಗಳು ಒಂದೊಂದು ಮುತ್ತುಗಳು. ಅವುಗಳಲ್ಲಿ ಕಂಡುಬರುವ ಆಧ್ಯಾತ್ಮಿಕ ತಿರುಳು, ಸಮಾಜದ ವಿಡಂಭನೆ, ಅಸಮಾನತೆ, ಜಾತಿಯತೆ, ಸ್ತ್ರೀ ಶೋಷಣೆಗಳ ವಿರುದ್ಧ ಧ್ವನಿಯಾಗಿವೆ. ದಾಸ ಸಾಹಿತ್ಯದಲ್ಲಿ ಕವಿಯಾಗಿಯೂ ದಾಸರಾಗಿಯೂ ಮಹಾನ್ ಸಂತನಾಗಿಯೂ ಹೊರಹೊಮ್ಮಿದರು. ಕನಕದಾಸರ ಕೀರ್ತನೆಗಳು ನಿತ್ಯವೂ ಹೊಸ ಚೈತನ್ಯ ತಂದು ಕೊಡುವ, ಸಮಕಾಲೀನ ಪ್ರಜ್ಞೆಯನ್ನು ಮೂಡಿಸುವ, ಸಾಮಾಜಿಕ ಚಿಂತನೆಗೆ ಒರೆಹಚ್ಚಿ ವೈಚಾರಿಕ ಬೋಧನೆ ನೀಡುವ ಬಂಡಾಯ ಮನೋಭಾವದ ಚಿತ್ರಗಳನ್ನು ಕೊಡುತ್ತದೆ.

ಕನಕದಾಸರು ಸಾಮಾಜಿಕ ವಿಡಂಬನೆಯ ಮೂಲಕ ಲೋಕದ ಡೊಂಕನ್ನು ಕಟುವಾಗಿ ಟೀಕಿಸಿದರು. ಇವರು ಕೆಳವರ್ಗದಿಂದ ಬಂದು ದಾಸಪರಂಪರೆಯಲ್ಲಿ ಪ್ರಸಿದ್ದಿಯತೆಯನ್ನು ಪಡೆಯಲು ಕಾರಣ ಅವರ ಬದುಕು. ದಾಸರು ಹರಿತವಾದ ಕೀರ್ತನೆಗಳಿಂದ ಜನಮನ ಮುಟ್ಟುವಂತೆ ತಮ್ಮ ಚಿಕಿತ್ಸಕ ದೃಷ್ಟಿಯಿಂದ ಸಮಾಜವನ್ನು ನೋಡುತ್ತಾ ಸಮಾಜದ ವರ್ಗ, ವರ್ಣವ್ಯವಸ್ಥೆಯನ್ನು ಹೋಗಲಾಡಿಸಲು ಸಂಪೂರ್ಣ ಪ್ರಯತ್ನ ಮಾಡಿದ್ದಾರೆ.

ತಮ್ಮ ವಿಶಿಷ್ಟ ನಿಲುವುಗಳಿಂದ ವಚನಕಾರರಂತೆಯೇ ಹರಿದಾಸರೂ ಕೂಡ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹರಿಸರ್ವೋತ್ತಮತ್ವವನ್ನು ಎತ್ತಿ ಹಿಡಿದವರು. ಆದರೆ ವಚನಕಾರರದ್ದು ಸಹ ಹರ ಪಾರಮ್ಯ. ಅದರೆ ವಚನಕಾರರ ಮತ್ತು ಹರಿದಾಸರ ಉದ್ದೇಶ ಒಂದೇ. ಸಮಾಜದಲ್ಲಿ ನಿದ್ರೆಗೈಯ್ಯುತ್ತಿದ್ದ ದೀನರನ್ನು ಬಡಿದೆಬ್ಬಿಸಿ ಕಾವ್ಯದ ರಸದೌತಣದ ಅಡುಗೆಯನ್ನು ಬಡಿಸುತ್ತಲೇ, ಉಣಬಡಿಸಲು ನೂರಾರು ಜನರಿಗೆ ಕರೆ ನೀಡಿದರು. ಸ್ವಯಂ ಪ್ರೇರಿತರಾಗಿ ನೂರಾರು ಜನರು ವಚನಗಳನ್ನು ಕೀರ್ತನೆಗಳನ್ನು ರಚಿಸಿದರು. ಆ ಮೂಲಕ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಕೀರ್ತಿ ಹರಿದಾಸರಲ್ಲಿ ಅದರಲ್ಲೂ ದಾಸಸಾಹಿತ್ಯದ ಅಶ್ವಿನೀ ದೇವತೆಗಳೆನಿಸಿದ ಪುರಂದರ, ಕನಕದಾಸರಿಗೆ ಸಲ್ಲುತ್ತದೆ.

ವರ್ಣಾಶ್ರಮ ಧರ್ಮಗಳ ಪಾಲನೆಯು ಇನ್ನೂ ಕಟ್ಟುನಿಟ್ಟಾಗಿ ಪಾಲಿಸಲ್ಪಡುತ್ತಿದ್ದ ಕಾಲದಲ್ಲಿಯೇ ಅದರ ಕಟ್ಟುಪಾಡುಗಳನ್ನು ಮೀರಿ ಕ್ರಾಂತಿಯನ್ನು ಉಂಟು ಮಾಡಿದವರು. ಕನಕದಾಸರು ಸ್ವತಂತ್ರ ಮನೋವೃತ್ತಿಯವರು. ಸಮನ್ವಯಭಾವ ಪರಂಪರೆಯ ಕೆಲವು ವಿಚಾರಗಳಿಗೆ ಬದ್ಧರಾಗಿರುವುದು ಅವರ ಕೃತಿಗಳ ಅಭ್ಯಾಸದಿಂದ ಸ್ಪಷ್ಟವಾಗುತ್ತದೆ. ಆದ್ದರಿಂದ ಇಂದಿನ ವಿಚಾರವಾದಿ ವಿಮರ್ಶಕರಿಗೆ, ಓದುಗರಿಗೆ ಅವರ ಕೃತಿಗಳಲ್ಲಿ ಒಡಮೂಡಿದ ಮುಗ್ಧ ಭಕ್ತಿ, ಅನನ್ಯ ಶರಣಾಗತಿ, ದೈವೀಕೃಪೆಯ ಮಹಿಮೆ, ಕರ್ಮ ಸಿದ್ಧಾಂತದಲ್ಲಿಯ ಶ್ರದ್ದೆ ನೆಲೆಸಿವೆ. ಆದರೂ ಅವರು ಬದುಕಿದ್ದ ಕಾಲ ಮತ್ತು ಪರಿಸರದ ಹಿನ್ನೆಲೆಯಲ್ಲಿ ಅವರ ಕೃತಿಗಳನ್ನು ಪರಿಶೀಲಿಸಿದಾಗ ಕನಕದಾಸರು ಅನುಭಾವಿ ಸಂತರಾಗಿ, ಕವಿಯಾಗಿ ಕಾಣಿಸುತ್ತಾರೆ. ಅವರ ಕೃತಿಗಳಲ್ಲಿ ಅಭಿವ್ಯಕ್ತಗೊಂಡ ಸಮಾಜ ವಿಮರ್ಶೆ, ಸಮನ್ವಯ ದೃಷ್ಟಿ, ಪ್ರೀತಿ, ವಾತ್ಸಲ್ಯ ಭಾವನೆ, ಪತಿತೋದ್ಧಾರ ವಿಚಾರಗಳು ಎಲ್ಲರನ್ನು ಆಕರ್ಷಿಸುತ್ತವೆಯೆಂದು ಹೇಳಬಹುದು. ಓದುಗರನ್ನು ಸೆಳೆಯುವಂತಹ ಅಂಶಗಳು ಕನಕದಾಸರ ಕೃತಿಗಳಲ್ಲಿ ಪ್ರತಿಪಾದನೆಗೊಂಡಿರುವುದು ಸ್ಪಷ್ಟವಾದದ್ದು. ಈ ದೃಷ್ಟಿಯಿಂದ ಇಂದಿನ ತಾಂತ್ರಿಕ, ವಿಮಾರ್ಶಾತ್ಮಕ ವಿಚಾರವಾದಿಗಳ ಕಾಲದಲ್ಲಿಯು ಕನಕದಾಸರ ಕೃತಿಗಳು ಸಮಾಜಕ್ಕೆ ಪ್ರಸ್ತುತವೆನಿಸುತ್ತವೆ.

ಕನಕದಾಸರ 'ರಾಮಧಾನ್ಯ ಚರಿತೆ'. ಇದೊಂದು ವಿಡಂಬನ ಕಾವ್ಯ. ಇದರ ಕತೆ ಧಾನ್ಯಗಳ ನಡುವಿನ ಶ್ರೇಷ್ಠತೆಯ ನಿರ್ಣಯಕ್ಕೆ ಸಂಬಂಧಿಸಿದ್ದು. ಭತ್ತ ಮತ್ತು ರಾಗಿಗಳನ್ನು ರೂಪಕಗಳಾಗಿ ಬಳಸಿಕೊಂಡು ಕನಕದಾಸರು ಮೇಲು-ಕೀಳು ತಾರತಮ್ಯಗಳ ಹುಚ್ಚುತನದ ಪರಮಾವಧಿಗಳನ್ನು ಲೇವಡಿ ಮಾಡಿದ್ದಾರೆ. ಇದು ಒಂದು ರೀತಿಯಲ್ಲಿ ಕರ್ನಾಟಕದ ಆಹಾರ ಪದ್ಧತಿಯನ್ನು ವಿಶ್ಲೇಷಿಸುವ ಕಾವ್ಯ ಕೂಡ ಹೌದು. ಶ್ರೀರಾಮನು ರಾವಣನ ಸಂಹಾರದ ನಂತರ ಅಯೋಧ್ಯೆಗೆ ಹಿಂತಿರುಗುವ ಮಾರ್ಗದಲ್ಲಿ ಗೌತಮ ಮುನಿಗಳ ಆಶ್ರಮಕ್ಕೆ ಭೇಟಿ ನೀಡುತ್ತಾನೆ. ಅಲ್ಲಿ ನವಧಾನ್ಯಗಳಲ್ಲಿ ಯಾರು ಶ್ರೇಷ್ಠ ಎಂಬ ಚರ್ಚೆ ಆರಂಭವಾಗುತ್ತದೆ. ಭತ್ತ ಮತ್ತು ರಾಗಿಯ ನಡುವೆ ಜಗಳ ಶುರುವಾಗುತ್ತದೆ. ಗೌತಮ ಮುನಿಗಳು ರಾಗಿಯ ಶಕ್ತಿ ಸಾಮರ್ಥ್ಯಗಳನ್ನು ಹೊಗಳುತ್ತಾರೆ. ಭತ್ತ ಮತ್ತು ರಾಗಿಗಳು ಪರಸ್ಪರ ತಂತಮ್ಮ ಶಕ್ತಿ ಪ್ರಶಂಸೆ ಮಾಡಿಕೊಳ್ಳುತ್ತಾ ಮತ್ತು ಪರಸ್ಪರರನ್ನು ದೂಷಿಸಿಕೊಳ್ಳುತ್ತಾ ಅವೆರಡರ ನಡುವೆ ವಾದ ವಿವಾದ ಶುರುವಾಗುತ್ತದೆ. ಆಗ ಶ್ರೀರಾಮನು ಎರಡನ್ನು ಆರು ತಿಂಗಳ ಕಾಲ ಬಂಧನದಲ್ಲಿರಿಸಿ ಆಮೇಲೆ ಇವರಿಬ್ಬರಲ್ಲಿ ಯಾರು ಶ್ರೇಷ್ಠ ಎಂದು ತೀರ್ಮಾನಿಸುತ್ತೇನೆ ಎಂದು ಆಜ್ಞಾಪಿಸುತ್ತಾನೆ. ಅಂತೆಯೇ ಆರು ತಿಂಗಳ ಸೆರೆವಾಸದ ನಂತರ ರಾಮನ ಮುಂದೆ ಎರಡೂ ಧಾನ್ಯಗಳನ್ನು ಹಾಜರು ಪಡಿಸುತ್ತಾರೆ. ಆಗ ಭತ್ತವು ಸೊರಗಿ ಮಾಸಲು ವಾಸನೆಯಿಂದ ನರಳುತ್ತಿರುತ್ತದೆ. ರಾಗಿ ಮಾತ್ರ ಸ್ವಲ್ಪ ಕೂಡ ತನ್ನ ಕಾಂತಿ ಕಳೆದುಕೊಳ್ಳದೆ ಆರೋಗ್ಯದಿಂದ ಇರುತ್ತದೆ. ರಾಮ ಇದನ್ನು ನೋಡಿ ರಾಗಿಯೇ ಶ್ರೇಷ್ಟವೆಂದು ಹೇಳಿ ತನ್ನ ಹೆಸರನ್ನೇ ರಾಗಿಗೆ ನೀಡುತ್ತಾನೆ. 'ರಾಘವ' ಎಂಬುದರ ಸಂಕ್ಷಿಪ್ತ ರೂಪವೇ 'ರಾಗಿ' ಎಂದಾಗಿ ಲೋಕದಲ್ಲಿ ಜನಪ್ರಿಯವಾಗುತ್ತದೆ.

ಭಾರತೀಯ ಜಾತಿವ್ಯವಸ್ಥೆಯಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ಸ್ಥಾನಮಾನದ ವಂಚಿತರಾದ ತಳಸಮುದಾಯಗಳ ನೋವುಗಳನ್ನು ಹೇಳುವಂತ ಕೃತಿಯು ರಾಮಧಾನ್ಯಚರಿತ್ರೆಯಾಗಿದೆ. ಸಸ್ಯ ಸಹಜವಾದ ಆಹಾರ ಧಾನ್ಯಗಳ ಮೂಲಕ ಸಮಸ್ಯೆಗಳ ವಿವರವಾದ ಕುರಿತು ಚರ್ಚೆಯನ್ನು ಕಟ್ಟಿಕೊಡುವ ಈ ಕೃತಿಯಲ್ಲಿ

ಕೆಳಸಮುದಾಯಗಳನ್ನು ಕಡೆಗಣಿಸುವ ಉತ್ತಮ ಕುಲವರ್ಗದವರ ವಿವರಗಳನ್ನು ಈ ಕೃತಿ ಅನಾವರಣಗೊಳಿಸಿದೆ. ರಾಮಧಾನ್ಯಚರಿತ್ರೆಯಲ್ಲಿ ರಾಗಿ ಮತ್ತು ಭತ್ತಗಳ ನಡುವಿನ ವಾಗ್ವಾದವು ಸಮಾಜದಲ್ಲಿರುವ ವರ್ಗ–ವರ್ಣ ಸಂಘರ್ಷಗಳ ನಡುವಿನ ಘರ್ಷಣೆಯಾಗಿ ಬಿಂಬಿತವಾಗಿದ್ದರೂ, ಕನಕದಾಸರು ಕೆಳವರ್ಗದಲ್ಲಿ ಜನಿಸಿದ ಒಂದೇ ಕಾರಣದಿಂದ ಸಾಮಾಜಿಕವಾಗಿ ಆಗುತ್ತಿದ್ದ ಅನ್ಯಾಯವನ್ನು ಸೂಚಿಸುತ್ತದೆಂದು, ವರ್ಗ ಹೋರಾಟವನ್ನು ಸಂಕೇತಿಸುತ್ತದೆಂದು ಹೇಳಬಹುದು. 'ರಾಮಧಾನ್ಯಚರಿತ್ರೆ' ಕಾವ್ಯವನ್ನು ಮುಖ್ಯವಾಗಿ ಅವಲೋಕಿಸಿದರೆ ಇದು ಜಾತಿ, ವರ್ಗ–ವರ್ಣ ಸಂಘರ್ಷ ನೆಲೆಯದ್ದಾಗಿದ್ದು ಮೇಲ್ವರ್ಗದ ಶ್ರೀಮಂತರು ಅಂತಃಸತ್ವವಿಲ್ಲದವರಾಗಿದ್ದು ಕೇವಲ ಅಹಂಕಾರಿಗಳಾಗಿ, ಬಾಹ್ಯ ಆಡಂಬರದಿಂದ ಬದುಕುತ್ತಾರೆ ಎಂಬುದು ಕವಿಯ ನಿಲುವು. ಇದಲ್ಲದೆ ಜನಸಾಮಾನ್ಯರಿಗೆ ಸಮಾಜದಲ್ಲಿನ ಸಾಮಾಜಿಕ ಸಮಸ್ಯೆಗಳು, ಅಂಕುಡೊಂಕುಗಳು ಅರಿವಾಗಬೇಕೆಂಬ ಮಹತ್ವಪೂರ್ಣವಾದ ಆಶಯ ಕೃತಿಯಲ್ಲಿ ಅಡಕಗೊಂಡಿದೆ.

ರಾಮಧಾನ್ಯ ಚರಿತೆ ಕೇವಲ ಧಾನ್ಯಗಳ ನಡುವಿನ ವಾದವಿವಾದವಲ್ಲ; ಅದು ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಪರಿಸರ, ಮೌಲ್ಯಶಿಕ್ಷಣ, ಜನಪದ ಆಹಾರಪದ್ಧತಿ ಮತ್ತು ಮಾನವೀಯತೆಯ ಆದರ್ಶಗಳನ್ನು ಒಳಗೊಂಡ ಸಾಹಿತ್ಯಕ ಕೃತಿ. ಶತಮಾನಗಳ ಹಿಂದೆ ಬರೆದ ಈ ರೂಪಕಕಾವ್ಯ ಇಂದಿನ ದಿನಮಾನಕ್ಕೆ ಹೆಚ್ಚು ಅನ್ವಯಿಸುವುದು ಅದರ ಶಾಶ್ವತ ಮಾನವೀಯ ಮೌಲ್ಯಗಳ ಕಾರಣ. ಕನಕರು ಭತ್ತ ಮತ್ತು ರಾಗಿಗಳ ನಡುವೆ ನಡೆದ ಸಂವಾದವನ್ನು ರೂಪಕವಾಗಿ ಬಳಸಿದರೂ, ಅದರ ಹಿಂದೆ ಅಡಗಿರುವ ಅರ್ಥಗಳು ಅತ್ಯಂತ ಗಂಭೀರ. ಭತ್ತ ಶ್ರೀಮಂತಿಕೆ, ವೈಭವ, ಅಹಂಕಾರ, ಮೆರಗು ಮತ್ತು ಸಾಮಾಜಿಕ ಮೇಲ್ವರ್ಗದ ಪ್ರತೀಕ. ರಾಗಿ ಸರಳತೆ, ಶ್ರಮ, ನಿಸರ್ಗಪೋಷಿತ ಆಹಾರ, ಅಂಚಿನ ಸಮಾಜ ಮತ್ತು ನೈಜತೆಯ ಪ್ರತೀಕ. ಈ ಎರಡು ಧಾನ್ಯಗಳ ಮುಖಾಂತರ ಕನಕರು ಸಾಮಾಜಿಕ ವರ್ಗವ್ಯವಸ್ಥೆಯನ್ನು, ಆಹಾರ ಸಂಸ್ಕೃತಿಯ ರಾಜಕೀಯವನ್ನು ಮತ್ತು ನೈತಿಕ ಮೌಲ್ಯಗಳ ಬದಲಾವಣೆಯನ್ನು ಪ್ರಶ್ನಿಸುತ್ತಾರೆ. ಅವರ ಪ್ರಶ್ನೆಗಳು ಆ ಕಾಲದಲ್ಲಿದ್ದ ಸವಾಲಿನಂತೆಯೇ ಇಂದಿನ ಕಾಲಕ್ಕೂ ಸೂಕ್ತ.

ಇಂದಿನ ಸಮಾಜದಲ್ಲಿ ಆಹಾರವನ್ನೂ 'ಪ್ರತಿಷ್ಠೆ'ಯಾಗಿ ಪರಿಗಣಿಸುವ ಪ್ರವೃತ್ತಿ ಹೆಚ್ಚಾಗಿದೆ. ಮದುವೆ ಹಬ್ಬಗಳಲ್ಲಿ, ಹೋಟೆಲ್ ಸಂಸ್ಕೃತಿಯಲ್ಲಿ, ಸಾಮಾಜಿಕ ಮಾಧ್ಯಮಗಳಲ್ಲಿ ಮನುಷ್ಯ ತನ್ನ ಆಹಾರದ ಮೂಲಕ 'ಸ್ಥಾನಮಾನ' ಪ್ರದರ್ಶಿಸುತ್ತಾನೆ. ಆದರೆ ಅದರೊಳಗಿನ ನೈಜ ಪೌಷ್ಟಿಕತೆ, ಆರೋಗ್ಯ, ಮಣ್ಣು–ನಿಸರ್ಗದ ಸಂಬಂಧಗಳು ಮರೆತು ಹೋಗುತ್ತಿವೆ. ಕನಕರು ಇದನ್ನೆಲ್ಲ ರಾಮಧಾನ್ಯ ಚರಿತೆಯಲ್ಲಿ ಭತ್ತದ ರೂಪಕದ ಮೂಲಕ ಶತಮಾನಗಳ ಹಿಂದೆಯೇ ವ್ಯಂಗ್ಯ ರೂಪದಲ್ಲಿ ಸೂಚಿಸಿದ್ದಾರೆ. ಭತ್ತದ ಅಹಂಕಾರವನ್ನು ಅವರು ಕೇವಲ ಆಹಾರದ ಮೌಲ್ಯವಲ್ಲ, ಮನುಷ್ಯನ ಮೌಲ್ಯಗಳನ್ನುಗಳಿಸಲು ಪ್ರಾರಂಭಿಸಿದ ಬಾಹ್ಯ ವೈಭವ ಎಂದು ನೋಡುತ್ತಾರೆ. ರಾಗಿಯ ಮಹತ್ವವನ್ನು ಅವರು ವಿವರಿಸುವಾಗ ಪ್ರಕೃತಿಯ, ಮಣ್ಣಿನ, ಗ್ರಾಮೀಣ ಶ್ರಮದ ಮಹತ್ವ ತಿಳಿಸುತ್ತಾರೆ. ರೈತನ ಜೀವನ, ಗ್ರಾಮೀಣ ಪೋಷಣಾ ಪದ್ಧತಿ, ಮಣ್ಣು–ನಿಸರ್ಗದ ಜೊತೆಗಿನ ನಿಕಟ ಸಂಬಂಧ ಇಂದಿನ ವೇಗದ ಯುಗದಲ್ಲಿ ಹಿಂದುಳಿದಂತೆ ಕಾಣುತ್ತದೆ. ಆದರೆ ಹವಾಮಾನ ಬದಲಾವಣೆ, ನೀರಿನ ಕೊರತೆ, ರಾಸಾಯನಿಕ ಕೃಷಿಯ ಅಪಾಯ ಈ ಎಲ್ಲ ಸವಾಲುಗಳ ನಡುವೆ ರಾಗಿಯ ಚಿಂತನೆ

ಸುಸ್ಥಿರ ಕೃಷಿಯ ಮಾರ್ಗದರ್ಶಕವಾಗಿದೆ. ರಾಗಿ ಬೆಳೆಗೇ ಹೆಚ್ಚು ನೀರಿನ ಅವಶ್ಯಕತೆಯಿಲ್ಲ, ರಾಸಾಯನಿಕವೂ ಬೇಡ, ಮಣ್ಣು ಹಾಳಾಗುವುದಿಲ್ಲ, ಪರಿಸರ ಸಮತೋಲನಕ್ಕೆ ಸಹಕಾರಿ. ಕನಕರು ರಾಗಿಯ ಮಹತ್ವವನ್ನು ಹೊಗಳುವಾಗ, ಅವರು ಪರಿಸರ ಸ್ನೇಹಿ ಆಹಾರ ಪದ್ಧತಿಯನ್ನು ಒತ್ತಿ ಹೇಳುತ್ತಿರುವುದನ್ನು ನಾವು ಇಂದು ಕಾಣುತ್ತಿದ್ದೇವೆ.

ಭತ್ತದ ವೈಭವ, ರಾಗಿಯ ನೈಜತೆ ಎಂಬ ದ್ವಂದ್ವವನ್ನು ಕನಕರು ರೂಪಿಸಿದರೂ, ಅದರ ಹಿಂದೆ ಇನ್ನೊಂದು ಸಾಮಾಜಿಕ ಮರ್ಮವಿದೆ. ಅದು ಮನುಷ್ಯನ ಮೌಲ್ಯವೆಂದರೇ ಅವನ ಸ್ಥಾನಮಾನ ಅಥವಾ ಆಸ್ತಿ ಅಲ್ಲ, ಅವನ ಗುಣ, ಶ್ರಮ, ನೈಜತೆ, ಹೊಂದಾಣಿಕೆ ಮತ್ತು ಮಾನವೀಯತೆ ನಿರ್ಧರಿಸಬೇಕು ಎಂಬ ಸಂದೇಶ. ಇಂದಿನ ದಿನಮಾನದಲ್ಲಿ ಈ ಮೌಲ್ಯಗಳು ಮಸುಕಾಗುತ್ತಿರುವುದು ಕಂಡುಬರುತ್ತಿದೆ. ಮನುಷ್ಯ ತನ್ನ ಬದುಕನ್ನು ಯಾಂತ್ರಿಕಗೊಳಿಸಿಕೊಂಡಿದ್ದಾನೆ. ಸಂಬಂಧಗಳು ಹವಳದ ಮೌಲ್ಯಕ್ಕಿಂತ ಕಡಿಮೆ. ಮಾನವೀಯತೆ ಎನ್ನುವುದು ಬಾಹ್ಯ ಮೆರಗುಗಳಲ್ಲಿ ಕಳೆದು ಹೋಗುತ್ತಿದೆ. ಈ ಸಂದರ್ಭದಲ್ಲಿ ಕನಕರು ಹೇಳುವ ರಾಗಿಯ ಮೌಲ್ಯಗಳು ಸತ್ಯ, ಶ್ರಮ, ಸರಳತೆ ಇವುಗಳು ಆತನ ಜೀವನದ ಮಾರ್ಗದರ್ಶನಗಳು. ಸಾಮಾಜಿಕ ಅಸಮಾನತೆ, ವರ್ಗಸಂಘರ್ಷ, ಜಾತಿ–ಧರ್ಮದ ಭೇದಗಳ ಸಮಯದಲ್ಲಿ ರಾಮಧಾನ್ಯ ಚರಿತೆ ನೀಡುವ ಪಾಠಗಳು ಸಹಿಷ್ಣುತೆ ಮತ್ತು ಒಗ್ಗಟ್ಟಿಗೆ ದಿಕ್ಕುನಿಡುತ್ತವೆ. ಭತ್ತ ಮತ್ತು ರಾಗಿ ಇಬ್ಬರೂ ಸಮಾಜದ ಅಗತ್ಯ. ಆದರೆ ಯಾವುದು ಮೌಲ್ಯಪೂರ್ಣ ಎಂಬ ನಿರ್ಣಯದಲ್ಲಿ ನೈಜತೆ ಪ್ರಾಮುಖ್ಯ. ಇದೇ ತತ್ವವನ್ನು ನಮ್ಮ ಬಹುಸಂಸ್ಕೃತಿಯ ಸಮಾಜವೂ ಅನುಸರಿಸಬೇಕು. ವೈವಿಧ್ಯತೆ ಶಕ್ತಿಯೇ ಹೊರತು ದೌರ್ಬಲ್ಯವಲ್ಲ. ಕನಕರು ಇದನ್ನು ಆಹಾರದ ರೂಪಕದಲ್ಲಿ ಅಗಾಧ ಸಂದೇಶವನ್ನಾಗಿ ಪರಿವರ್ತಿಸಿದ್ದಾರೆ. ಇದೇ ಕಾರಣದಿಂದ ರಾಮಧಾನ್ಯ ಚರಿತೆ ಸಾಹಿತ್ಯದ ಕೃತಿ ಮಾತ್ರವಲ್ಲ ಮನುಷ್ಯ–ಸಮಾಜ–ಪ್ರಕೃತಿ–ಮೌಲ್ಯಗಳ ಮಹಾಪಾಠ. ಅದರ ಸಾಹಿತ್ಯಿಕ ರೂಪಕ ಇಂದು ಪರಿಸರ ಸಂರಕ್ಷಣೆಗೆ, ಆಹಾರ ನ್ಯಾಯಕ್ಕೆ, ಸಾಮಾಜಿಕ ಸಮಾನತೆಗೆ ಮತ್ತು ಮಾನವೀಯ ಮೌಲ್ಯಗಳ ಪುನರುತ್ಥಾನಕ್ಕೆ ಪ್ರಾಮಾಣಿಕ ದಾರಿದೀಪವಾಗಿದೆ.

ಕನಕದಾಸರು ಚಿತ್ರಿಸುವ ಭತ್ತ ರಾಗಿಗಳ ಸಂವಾದದಲ್ಲಿ ಪ್ರಥಮವಾಗಿ ಕಾಣುವುದು ವರ್ಗಪ್ರಶ್ನೆಯ ನಿಖರ ವ್ಯಾಖ್ಯಾನ. ಸಮಾಜದಲ್ಲಿ ಅಸಮಾನತೆ ಮತ್ತು ವಿಭಜನೆಗಳು ಹೆಚ್ಚುತ್ತಿರುವ ಇಂದಿನ ಕಾಲದಲ್ಲಿ, 'ರಾಗಿ' ಎನ್ನುವ ಸರಳತೆಯ ಪ್ರತೀಕ ಮತ್ತೆ ಮೌಲ್ಯಪೂರ್ಣವಾಗುತ್ತದೆ. ಉದ್ಯೋಗ, ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಗಳಲ್ಲಿನ ಅಸಮಾನತೆ, ಕಾರ್ಪೊರೇಟ್ ಕೃಷಿಯ ಒತ್ತಡ ಮತ್ತು ಸಾಮಾನ್ಯ ರೈತನ ಜೀವನ ಹೋರಾಟ ಇವೆಲ್ಲ ಕನಕದಾಸರು ತೋರಿಸುವ ಸಾಮಾಜಿಕ ಅರ್ಥವನ್ನು ಮರುಪಷ್ಟಪಡಿಸುತ್ತವೆ. ಆಹಾರ ಸುರಕ್ಷತೆ ಮತ್ತು ಆರೋಗ್ಯದ ಪ್ರಶ್ನೆಗಳು ಜಾಗತಿಕ ಮಟ್ಟದಲ್ಲಿ ಚರ್ಚೆಗೆ ಕಾರಣವಾಗಿರುವ ಸಂದರ್ಭದಲ್ಲಿ ರಾಮಧಾನ್ಯ ಚರಿತೆ ನೀಡುವ ಸಂದೇಶಗಳು ಹೆಚ್ಚು ಪ್ರಸ್ತುತ. ಇಂದಿನ ಜಗತ್ತಿನಲ್ಲಿ ಜೀವನಶೈಲಿ ಕಾಯಿಲೆಗಳು, ಫಾಸ್ಟ್–ಫುಡ್ ಸಂಸ್ಕೃತಿ, ರಾಸಾಯನಿಕಗಳ ದಬ್ಬಾಳಿಕೆ ಇವೆಲ್ಲ ಮನುಷ್ಯನನ್ನು ಮೂಲ ಆಧಾರಗಳಿಂದ ದೂರ ಮಾಡುತ್ತಿವೆ. ಕನಕದಾಸರು ಸೂಚಿಸುವ 'ಸರಳತೆಯೆ ಸಂತೃಪ್ತಿಯ ಜೀವನ' ಇಲ್ಲಿಯೂ ಆಧುನಿಕ ಆರೋಗ್ಯ–ಪೋಷಣೆಯ ಚಿಂತನೆಗೆ ಹೊಂದಿಕೆಯಾಗುತ್ತದೆ. ನೈಸರ್ಗಿಕ ಆಹಾರದ ಕಡೆ ಇದೀಗ ವಿಜ್ಞಾನವೂ

ಒಲವು ತೋರಿಸುತ್ತಿರುವ ಸಂದರ್ಭದಲ್ಲಿ ಕನಕದಾಸರ ರಾಗಿ ಪ್ರಶಂಸೆ ದೂರದೃಷ್ಟಿಯ ಉದಾಹರಣೆಯಾಗಿದೆ. ಸಾಮಾಜಿಕ ವೈವಿಧ್ಯತೆ ಮತ್ತು ಮಾನವೀಯತೆ ಎಂಬ ಮೌಲ್ಯಗಳನ್ನು ಕನಕದಾಸರು ಅತ್ಯಂತ ಸೂಕ್ಷ್ಮವಾಗಿ ನಿರೂಪಿಸುತ್ತಾರೆ. ಇಂದು ಜಾತಿ–ಧರ್ಮ–ಭಾಷಾ ಭೇದಗಳು ಸಾಮಾಜಿಕ ಮಾಧ್ಯಮಗಳಿಂದ ಮತ್ತಷ್ಟು ಗಾಢವಾಗುತ್ತಿರುವ ಸಂದರ್ಭದಲ್ಲಿ ಕನಕದಾಸರು ನೀಡುವ ಸಂದೇಶ ಅತ್ಯಂತ ಅಗತ್ಯ. ಅವರ ಕೃತಿಯಲ್ಲಿ ಯಾವುದೇ ವಸ್ತು 'ಉನ್ನತ' ಅಥವಾ 'ಹೀನ' ಎಂಬ ನಿಲುವು ಇಲ್ಲ. ಅದರ ಉಪಯೋಗ, ನೈತಿಕತೆ ಮತ್ತು ಮಾನವ ಹಿತವೇ ಮುಖ್ಯ. ಈ ದೃಷ್ಟಿಕೋನ ಇಂದಿನ ಸಮಾಜಕ್ಕೆ ಮಾನವೀಯತೆಯ ಹೊಸ ವ್ಯಾಖ್ಯಾನ ನೀಡುತ್ತದೆ.

ಇಂದಿನ ಜಗತ್ತು ಅನೇಕ ರೀತಿಯಲ್ಲಿ ಅಭಿವೃದ್ಧಿಯಾಗಿದ್ದರೂ, ಅದರ ಮೂಲದಲ್ಲಿ ಅಸಮನತೆ, ಆಹಾರ ಸಂಕಷ್ಟ, ರೈತನ ನೋವು, ಪರಿಸರ ವಿನಾಶ, ಆರೋಗ್ಯ ವ್ಯವಸ್ಥೆ ಮತ್ತು ಮಾನವೀಯತೆಯ ಕುಸಿತದಂತಹ ಸಮಸ್ಯೆಗಳು ಹೆಚ್ಚುತ್ತಲೇ ಇರುವುದನ್ನು ನಾವು ಕಾಣುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಕನಕದಾಸರ ರಾಮಧಾನ್ಯ ಚರಿತೆ ಮನುಷ್ಯನಿಗೆ—ನೈತಿಕ ಜೀವನ, ಸರಳತೆ, ಶ್ರಮದ ಗೌರವ ಮತ್ತು ಪ್ರಕೃತಿಯ ಸಂರಕ್ಷಣೆ ಇವೇ ಮಾನವೀಯ ಮೌಲ್ಯಗಳು ಎನ್ನುವ ಅರಿವನ್ನು ಮತ್ತೊಮ್ಮೆ ನೆನಪಿಸುತ್ತದೆ. ಹೀಗಾಗಿ ಕನಕದಾಸರ ರಾಮಧಾನ್ಯ ಚರಿತೆ ಇಂದಿನ ದಿನಮಾನದಲ್ಲಿ ಕೇವಲ ಓದಲು ಇರುವ ಕೃತಿ ಅಲ್ಲ. ಅದು ಸಮಾಜದ ಅಳಿವು-ಉಳಿವಿನ ಮಾನದಂಡವಾಗಿದೆ. ಅದರ ಸಂದೇಶಗಳು ಕಾಲಾತೀತ, ಮನುಷ್ಯನ ಬದುಕಿಗೆ ಶಾಶ್ವತ. ನಮ್ಮ ಕಾಲದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಗೊಂದಲಗಳನ್ನು ಅರ್ಥಮಾಡಿಕೊಳ್ಳಲು ಅದರ ಸಂದೇಶಗಳು ಹೆಚ್ಚು ಪ್ರಸ್ತುತ, ಹೆಚ್ಚು ಜೀವಂತ.

**ಆಕರ ಗ್ರಂಥಗಳು**


- ದೇ.ಜವರೇಗೌಡ. (ಸಂ.) (೧೯೭೯). ರಾಮಧಾನ್ಯಚರಿತ್ರೆ. ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.
- ದೇ.ಜವರೇಗೌಡ. (೨೦೦೭). ಕನಕಾವಲೋಕನ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು,
- ಶಿರೂರ, ಬಿ.ವಿ.  (೨೦೧೬). ಕನಕದಾಸರು ಮತ್ತು ಆಧುನಿಕ ಚಿಂತನೆಗಳು: ಮುಖಾಮುಖಿ: ಕನಕ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ,
- ಸರೋಜಿನಿ ಸಿ. ಹಿರೇಮಠ. (೨೦೧೬). ರಾಮಧಾನ್ಯಚರಿತ್ರೆ: ಸಂಘರ್ಷದ ನೆಲೆ. ಕನಕ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ,
- ಚಿಕ್ಕಣ್ಣ ಕಾ.ತ. . (೨೦೧೬). ಕನಕದಾಸರು. ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ. ಕಾಗಿನೆಲೆ.